
ಒಂದಾಣೆ ಮಾಲೆ **26**

ಮಾರಾವತಾರ

(ಏಕಪಾತ್ರ ಯಕ್ಷಗಾನ ಪ್ರಬಂಧ)



ರಚಯಿತರು: ಶ್ರೀ ಜಿ ಆರ್. ಪಾಂಡೇಶ್ವರ.

1955 ಬೆಲೆ ಆಣೆ ೧.

ಒಂದಾಣೆ ಮಾಲೆ — ಮಂಗಳೂರು.

ಒಂದಾಣೆ ಮಾಲೆ ಎಲ್ಲರಿಗಾಗಿ ಇದೆ

ಒಂದಾಣೆ ಮಾಲೆಯಲ್ಲಿ ಈ ವರೆಗೆ ಪ್ರಕಟವಾದ ಪುಸ್ತಕಗಳು

೧. *ಕೆಪ್ಪಟೆರಾಯ (ವಿನೋದ ಕಥೆ) ಲೇ: ದಿ| ಎಮ್.ಎನ್.ಕಾಮತ್
೨. ನಾರೀಶ್ವರರು (ಏಕಾಂಕ ಪ್ರಹಸನ)
೩. *ಕಳ್ಳನಿಗೆ ಸಂಭಾವನೆ ಮತ್ತು ಇತರ ಕಥೆಗಳು
೪. ಸದ್ರಿಸುಬ್ಬ (ಏಕಾಂಕ ಪ್ರಹಸನ) ಲೇ: ದಿ| ಎಮ್.ಎನ್. ಕಾಮತ್
೫. ಅದ್ಭುತ ತ್ಯಾಗ ಮತ್ತು ಇತರ ಕಥೆಗಳು (ಎಮ್. ಆರ್. ಭಟ್)
೬. ಚುನಾವಣೆ ಅರ್ಥಾತ್ ಬನಾವಣೆ (ಏಕಾಂಕ ಪ್ರಹಸನ)
೭. 'ಬೀಡಿಸೇದಬೇಡಿ' ಮತ್ತು 'ಆ ಮಗು' (ವಿನೋದ ಕಥೆಗಳು)
೮. ಇಂಗ್ಲಿಷ್-ಕನ್ನಡ ಅರ್ಥಕೋಶ (ಭಾರತ ಸಂವಿಧಾನದಿಂದ)
೯. *ಲಂಚಕ್ಕೆ ಸಂಚಕಾರ (ಡಾ| ಎಸ್. ಪಿ. ಭಟ್.)
೧೦. ಟಿಶ್ಯೂ ಔಷಧಿಗಳ ಕೈಪಿಡಿ
೧೧. ಶ್ರೀಕ್ಷೇತ್ರ ಧರ್ಮಸ್ಥಳ (ದ್ವಿತೀಯ ಮುದ್ರಣ)
೧೨. ಜೀವದ ಮೌಲ್ಯ (ಎಲ್. ಎಸ್. ನಾಯಕ.)
೧೩. ಸತ್ತವನ ಸೇಡು (ಡಾ| ವಿ. ಆರ್. ಭಟ್.)
೧೪. "ವೆಂಕಟನ ಸಂಕಟ" (ಏಕಾಂಕ ಪ್ರಹಸನ) ಮತ್ತು ಎರಡು ಕಥೆಗಳು
೧೫. ಬಾಬಿಗೆ ಬಾಸಿಂಗ (ಏಕಾಂಕ ಪ್ರಹಸನ)
೧೬. ವೇಣೂರಿನ ಗತವೈಭವ ೧೭. ಒಗಟುಗಳು (ಟಿ. ಚಂದ್ರರಾಜ ಸೆಟ್ಟಿ)
೧೮. ಜಗಳಗಂಟಿ ಮತ್ತು ಇತರ ಕಥೆಗಳು ೧೯. ರಥೋತ್ಸವ
೨೦. ಕೆರೀನಾಯಿ ಮತ್ತು ಮುಪ್ಪು. (ಲೇ: ದಿ| ಎಂ. ಎನ್. ಕಾಮತ್)
೨೧. ಭಾರತದ ಮಹಾನಗರಗಳು. (ಪ್ರಥಮ ಭಾಗ)
೨೨. ತಿರುಕ್ಕುರಲ್ (ಶ್ರೀ| ಡಿ. ಪುಟ್ಟ ಸ್ವಾಮಿ)
೨೩. ಸೂರ್ಯನ ಸಂಸಾರ ಮತ್ತು ಇತರ ಕಥೆಗಳು
೨೪. ಭಾರತದ ಮಹಾನಗರಗಳು (ದ್ವಿತೀಯ ಭಾಗ)
೨೫. ಧೈರ್ಯ ಮತ್ತು ಇತರ ಸತ್ಯಕಥೆಗಳು
೨೬. ಮಾರಾವತಾರ (ಏಕಪಾತ್ರ ಯಕ್ಷಗಾನ ಪ್ರಬಂಧ)

* ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಈ ವರೆಗೆ ಇಪ್ಪತ್ತಾರು ಪುಸ್ತಕಗಳಲ್ಲಿ, ಒಟ್ಟು ಇಪ್ಪತ್ತಾರು ಆಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆ ಕೂಡ 584 ಪುಟಗಳನ್ನು ಕೊಟ್ಟಿರುತ್ತದೆ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ, ಮಂಗಳೂರು-1

ಎಲ್ಲರಿಗೆ ಬೇಕಾದುದು ಒಂದಾಣೆ ಮಾಲೆಯಲ್ಲಿದೆ.

ಮಾರಾವತಾರ

(ಪುಷ್ಪಧನ್ವ)

ಏಕಪಾತ್ರ ಯಕ್ಷನಾಟ್ಯಗೀತ

ಕನ್ನಡದ ಯಕ್ಷಗಾನಸಾಹಿತ್ಯಸೃಷ್ಟಿಯಲ್ಲಿ ಈ ಬಗೆಯ ಏಕಪಾತ್ರ ಪ್ರಸಂಗ ಇದುವರೆಗೆ ರಚಿತವಾದಂತೆ ತೋರುವುದಿಲ್ಲ. ಶಾಲೆ-ಕಾಲೇಜುಗಳ ವಿಶೇಷೋತ್ಸವಗಳಲ್ಲಿ ಏಕಾಂಕನಾಟಕಗಳನ್ನು ಆಡುವಂತೆ ಏಕಪಾತ್ರ ಯಕ್ಷಗಾನ ಪ್ರಸಂಗವನ್ನು ಆಡಿದಲ್ಲಿ, ಜನರಿಗೆ—ಅದರಲ್ಲಿಯೂ ಸುಶಿಕ್ಷಿತ 'ಮಾರ್ಗನಾಟಕ' ಪ್ರೇಮಿಗಳಿಗೆ—ಯಕ್ಷಗಾನ ಪ್ರಸಂಗಗಳ ಬಗೆಗೆ ಹೆಚ್ಚಿನ ರಸಾಭಿರುಚಿ ಉಂಟಾದೀತೆಂದು ಬಗೆದು ಈ ಪುಟ್ಟ ಕೃತಿ ರಚಿಸಿದ್ದೇನೆ. ನಿರುತ್ಸಾಹ ಮತ್ತು ನಿಷ್ಕ್ರಿಯತೆಯ ವಿರಕ್ತ ಜೀವನವು ಜನಾಂಗದ ಏಳಿಗೆಯನ್ನು ತಡೆಗಟ್ಟುವುದು; ಅದರ ವಿರುದ್ಧವಾಗಿ ಹೋರಾಡಿ, ಮಾರನು ಜಗತ್ತನ್ನು ಉಳಿಸಿ ಬೆಳೆಸುವನು. ಇದೇ ಪುಷ್ಪಧನ್ವ ಜೀವನದ ರಹಸ್ಯ. ಯಕ್ಷಗಾನದ ಅರ್ಥವಿವರಣೆಯು ಹೇಗಿರಬೇಕೆಂಬುದನ್ನು ಸೂಚಿಸಲಾಪಂತೆ ಪ್ರತಿ ಪದ್ಯಕ್ಕೂ ಅರ್ಥವಿವರಣೆ ಮಾಡಿದೆ. ಈ ವಿವರಣೆಯಲ್ಲಿ ಪಂಚಬಾಣಗಳ ತತ್ತ್ವವನ್ನು ಹೊಸದೃಷ್ಟಿಯಿಂದ ಅರ್ಥಯಿಸಿರುವೆನು. ಭರತನಾಟ್ಯ-ಕಥಕ್ಕಳಿ ನೃತ್ಯಗಳನ್ನು ಅನೇಕ ವರ್ಷಕಾಲ ದಕ್ಷಿಣ ಭಾರತದ ಕಲಾಕ್ಷೇತ್ರಗಳಲ್ಲಿ ಗುರುಮುಖೇನ ಅಭ್ಯಸಿಸಿ, ಪಾರಂಗತರಾಗಿ, ಕೀರ್ತಿವೆತ್ತ ಮಿತ್ರ* ಶ್ರೀ ಕುಲಕರ್ಣಿಯವರ ಒತ್ತಾಯವನ್ನು ತಡೆಯಲಾರದೆ ಈ ಕೃತಿಯನ್ನು ಅವರ ಈ 'ನೃತ್ಯಭಾರತಿ'ಯ ಮೂಲಕ ರಸಜ್ಞರ ದೃಷ್ಟಿಗೆ ತಂದಿರುವೆನು. ಇದನ್ನು ನಾನು ಸ್ವತಃ ಕುಣಿದು ತೋರಿಸುವ ಆಶೆ ಇಟ್ಟುಕೊಂಡಿರುವೆನಾದರೂ, ಕೃತಿಕರ್ತೃಗಳು ತಮ್ಮ ಕಲೋತ್ಸಾಹವನ್ನು ಕೃತಿರಚನೆಗಷ್ಟೇ ಪರಿಮಿತಿಗೊಳಿಸಿಕೊಂಡು ನೃತ್ಯಪ್ರದರ್ಶನವನ್ನು ಪ್ರಸಿದ್ಧ ಯಕ್ಷಗಾನನಟರಿಗೇ ಬಿಟ್ಟುಕೊಡುವುದು ಎಂದೆಂದಿಗೂ ಶ್ರೇಯಸ್ಕರ. ಈ ಕೃತಿಯಲ್ಲಿಯ ಲೋಪದೋಷಗಳನ್ನು ರಸಜ್ಞ ವಿದ್ವಾಂಸರು ಗಣನೆಗೆ ತಂದುಕೊಳ್ಳದೆ, ಈ ಸಾಹಿತ್ಯದಲ್ಲಿಯ ಮೊಟ್ಟಮೊದಲನೆಯದಾದ "ಏಕಪಾತ್ರ ಪ್ರಸಂಗ"ವಿದನ್ನು ಎತ್ತಿ ಮುದ್ದಾಡಿ ಆಶೀರ್ವದಿಸಿದರೆ ನನ ಶ್ರಮ ಸಫಲವಾದಂತೆಂದು ಭಾವಿಸಿದ್ದೇನೆ.

—ಜಿ. ಆರ್. ಪಾಂಡೇಶ್ವರ.

---

*'ನಾಟ್ಯಾಚಾರ್ಯ' ಕುಲಕರ್ಣಿ ಶ್ರೀನಿವಾಸ ಬಿ. ಏ., ಸಂಪಾದಕ "ನೃತ್ಯಭಾರತಿ."

ನಾಂದಿ

ವಾ. ಪ. ತನ್ನಾತ್ಮದೊಳಿ ಸರ್ವಸೃಷ್ಟಿಶಕ್ತಿಯು ಧರಿಸಿ ।
ತಣ್ಣಗಾಗಿಸಿ ಸರ್ವಜೀವಜಾತಂಗಳಂ ।
ಉನ್ನತ ಹಿಮಾದ್ರಿ ಪರಿಸರದಿ ನಿಷ್ಕ್ರಿಯು
ರೂಪನಾಗಿ ಶಿವ ತಪದೊಳಿರಲು ॥
ಖಿನ್ನವಾಗಿರೆ ನಿರುತ್ಸಾಹತಮದಲಿ ಲೋಕ ।
ಪನ್ನಂಗಶಯನ ಕುಂಡಲಿಯು ಮೂಲವನೆತ್ತಿ ।
ತನ್ನ ಲೀಲಾಂಗಪ್ರೇಮಾವತಾರದ ಮಾರರೂಪವಂ
ತೋರ್ದ ಜಗಕೆ ॥

(ನಾಟ—ಆದಿತಾಳ)

ಬಂದ ಬಂದ ಮಾರಾ । ಜಗದೇಕ ಸುಧಾಕರ ।
ಸುಂದರ ಸುಕುಮಾರಾ
ಬಂದ ನಿಂದ ರಜತಾದ್ರಿ ಸಮೀಪ
ಬಂಧುರಕರ ಸುಮಚಾಪಕಲಾಪ
ಸುಂದರಾಂಗಿ ಸಮ್ಮೋಹನಕರ ಕಿರಣ। ನಯನಾರುಣ ಧಾರಣ।
ಸುಂದರಾಂಗ ರತಿದೇವಿ ಮನೋರಮಣ ॥
ವಾರಿಜಾಸ್ಯ ಮೃದುಹಾಸ್ಯ ರಸಾಧರ ।
ಧೀರ ವೀರ ಶೃಂಗಾರಕಲಾಕರ
ಕೋಕಕಂಠನಾದಾಮೃತ ಮೃದುಚರಣ ।
ಸುಮಗಂಧಸಮೀರಣ ।
ನಾಕಲೋಕ ಪರಿಧಾನ ಶುಭಾಭರಣ ॥
ಪ್ರೇಮ-ಕಾಮರತ ಗೀತಸುಚಾರಣ
ಭೂಮಿ–ವ್ಯೋಮ ಸಂಸಾರಕೆ ಕಾರಣ

(ದ್ವಿಪದಿ—ತ್ರಿವುಡೆ)

ಇಲ್ಲಿ ಥಳಥಳಿಸುತಿದೆ ರಜತಗಿರಿ ಶಿಖರ
ಇಲ್ಲಿ ಹೊಳೆಹೊಳೆಯುತಿದೆ ಮಾನಸದ ಮುಕುರ
ಇದುವೆ ನಿರ್ವಿಷಯ ವಾತಾವರಣ ಧರಣಿ
ಇದೆಕೊ, ಉರಿಯಿಲ್ಲದೆಯು ಉರಿಯುವನು ತರಣಿ

ಇಲ್ಲಿರುವನಂತೆ ಶಿವ ತಪದಿ ಮೈಮರೆತು
ಒಲ್ಲೆ ಲೋಕತ್ರಯುವನೆಂಬ ಛಲವೆರೆತು
ಎಲ್ಲಿರುವನೆಲ್ಲಿರುವ ಹುಡುಕಿ ಬಹೆನೀಗ
ಪುಲ್ಲಸುಮಶರದಿಂದಲೆಚ್ಚರಿಪೆ ಬೇಗ

(ಭೈರವಿ—ಏಕತಾಳ)

ಓಹೊ, ಕೂತಿಹನಿಲ್ಲಿ । ಚೆಲ್ವಿನಬಳ್ಳಿ । ತಳಿರ ತಣ್ಣೆಳಲಲ್ಲಿ ॥
ವ್ಯಾಘ್ರಾಜಿನದ ಮೇಲೆ । ಪದ್ಮಾಸನದಿ ಕೂತುಕೊಂಡಿಹ ಲೀಲೆ ॥
ಬ್ರಹ್ಮಾಂಡಗಳ ಮಾಲೆ । ಕಂಠದಿ, ಕೈಲಿ । ತ್ರಿಗುಣ ತ್ರಿಶೂಲ ಜ್ವಾಲೆ ॥
ಸುತ್ತು ಸುತ್ತಿದೆ ಸರ್ಪ । ಸರ್ವಾಂಗವನ್ನೆ । ಎತ್ತಿ ಹೆಡೆಯು ದರ್ಪ ॥
ನಾಸಾಗ್ರದಲಿ ದೃಷ್ಟಿ । ಅರೆಮುಚ್ಚಿ ಮೆಚ್ಚಿ । ಕಡೆಗಣಿಸಿದೆ ಸೃಷ್ಟಿ ॥
ಆದಿಶಕ್ತಿಯ ಬೀಜ । ಭ್ರೂಮಧ್ಯ ಜ್ಯೋತಿ । ನೇತ್ರವಾಗಿದೆ ತೇಜ ॥

(ಕಾಂಭೋದಿ—ಝಂಪೆ)

ರೂಪ ರಸ ಗಂಧ ಸೌಂದರ್ಯ ಸೃಷ್ಟಿಯನೆಲ್ಲ ಕುಟ್ಟಿ ಹುಡಿಗೈದನೀತ ॥
ತಾಪಸೋತ್ತಮನಾಗಿ ಕೂತು ನಿಷ್ಕ್ರಿಯನಾಗಿ ಮರುಗಿಸಿದ ಜೀವಜಾತ ॥
ಪ್ರೇಮ ಕಾರುಣ್ಯ ಶೃಂಗಾರ ಜೀವಾಧಾರ ಸೃಷ್ಟಿ ಸರ್ವಸ್ವ ಸಂಸಾರ ॥
ಮಾರಾವತಾರ ಜೀವಾತ್ಮ ಮೋಹಾಕಾರ ನಿಷ್ಕ್ರಿಯ ವಿರಕ್ತಿಸಂಹಾರ ॥
ಪಂಚಭೂತದ ಪಂಚಬಾಣಗಳ ಬತ್ತಳಿಕೆ ಪಂಚವಿಷಯಾಗ್ನಿ ಜ್ವಾಲೆ ॥
ಮಿಂಚಿನಂತುರಿಯುವೆ, ಹೊಂಚಿ ಹೊರಹಾಯುತಿವೆ ಬರಿಗೈವೆನಿವನ ಮೇಲೆ ॥

(ಭೈರವಿ—ಏಕತಾಳ)

ಎಸೆವೆನು ಅರವಿಂದಾಸ್ತ್ರ । ಮುಖ-ಅರಳಿತು ನೋಡು ಪವಿತ್ರ ॥
ತೊಟ್ಟೆನಶೋಕವನೀಗ । ಹಿಮ್ಮೆಟ್ಟೆ ವಿರಕ್ತಿಯು ಬೇಗ ॥
ಇದೊ ಚೂತಾಂಬಿನ ಮೊನೆಯು । ರಸ-ತುಂಬಿದ ನೋಡದೊ ಮುನಿಯು ॥
ಮಲ್ಲಿಗೆಶರ ಗಮಗಮಿಸೆ । ಮುನಿ-ತಲ್ಲಣಿಸಿದ ಮನ ರಮಿಸೆ ॥
ಹೊಡೆವೆನು ನೀಲೋತ್ಪಲವ । ಮೈಡ-ಹಿಡಿಯಲಿ ಜೀವನದೊಲವ ॥
ಉರಿಯಾರಿತು ಶಿವನೇತ್ರ । ಸುಖ-ಮೆರೆಯಿತು ಜಗದಿ ವಿಚಿತ್ರ ॥
ದೃಶ್ಯಕೆ ಶಿವನೈತಂದ । ಅದೃಶ್ಯಕೆ ಮಾರನು ಸಂದ ॥

ಪ್ರಯೋಗದ ರೀತಿ: ಪದ್ಯಗಳನ್ನು ಹಿಮ್ಮೇಳದ ಭಾಗವತರು ಹಾಡುವರು. ಇದು ಏಕಪಾತ್ರಾಭಿನಯ ಪ್ರಸಂಗವಾಗಿರುವುದರಿಂದ ಮಾರವೇಷಧಾರಿಯು ಪ್ರತಿಪದ್ಯಕ್ಕೂ ಹೇಳುವ ಅರ್ಥವನ್ನು ಇಲ್ಲಿ ವಿವರಿಸಿದೆ.

ನಾಂದಿ

ವಾ. ಷ. ತನ್ಮಾತ್ರದೊಳೆ ಸರ್ವಸೃಷ್ಟಿಶಕ್ತಿಯು ಧರಿಸಿ
ತಣ್ಣಗಾಗಿಸಿ ಸರ್ವಜೀವಜಾತಂಗಳಂ |
ಉನ್ನತ ಹಿಮಾದ್ರಿ ಪರಿಸರದಿ ನಿಷ್ಕ್ರಿಯರೂಪನಾಗಿ
ಶಿವ ತಪದೊಳಿರಲು ||
ಖಿನ್ನವಾಗಿರೆ ನಿರುತ್ಸಾಹ ತಮದಲಿ ಲೋಕ |
ಪನ್ನಂಗಶಯನ ಕುಂಡಲಿಯ ಮೂಲವನೆತ್ತಿ |
ತನ್ನ ಲೀಲಾಂಗ ಪ್ರೇಮಾವತಾರದ ಮಾರರೂಪವಂ
ತೋರ್ದ ಜಗಕೆ ||

ಮಾರ ಪ್ರವೇಶ

(ನಾಟ— ಆದಿತಾಳ)

ಬಂದ ಬಂದ ಮಾರಾ | ಜಗದೇಕ ಸುಧಾಕರ
ಸುಂದರ ಸುಕುಮಾರಾ
ಬಂದ ನಿಂದ ರಜತಾದ್ರಿ ಸಮೀಪ
ಬಂಧುರಕರ ಸುಮಚಾಪ ಕಲಾಪ
ಸುಂದರಾಂಗ ಸಮ್ಮೋಹನಕರ ಕಿರಣ | ನಯನಾರುಣ ಧಾರಣ |
ಸುಂದರಾಂಗಿ ರತಿದೇವಿ ಮನೋರಮಣ ||
ವಾರಿಜಾಸ್ಯ ಮೃದುಹಾಸ್ಯ ರಸಾಧರ
ಧೀರ ವೀರ ಶೃಂಗಾರ ಕಲಾಕರ
ಕೋಕಕಂಠ ನಾದಾಮೃತ ಮೃದು ಚರಣ | ಸುಮಗಂಧ ಸಮೀರಣ |
ನಾಕಲೋಕ ಪರಿಧಾನ ಶುಭಾಭರಣ |
ಪ್ರೇಮ-ಕಾಮರತ ಗೀತಸುಚಾರಣ
ಭೂಮಿ-ವ್ಯೋಮ ಸಂಸಾರಕೆ ಕಾರಣ

ಮಾರ: (ಪೀಠಿಕೆ) ಸ್ವಗತ

ಚಂದ್ರೋದಯವಾಗುತ್ತಲೇ ಸಮುದ್ರ ಒಮ್ಮೆಗೇ ಉಕ್ಕಿಬಿಡುತ್ತದಂತೆ; ಸೂರ್ಯೋದಯವಾಗುತ್ತಲೇ ಮೊಗ್ಗೆಗಳೆಲ್ಲ ನಳನಳಿಸಿ ಅರಳಿ ಪರಿಮಳಿಸುವ ಪನ್ನೀರಿನ ಮಳೆಯನ್ನೇ ಕರೆದುಬಿಡುತ್ತವಂತೆ! ವಿಚಿತ್ರವ್ಯಕ್ತಿಗಳ ಪ್ರವೇಶ

ವಾಗುತ್ತಲೇ ವಿಚಿತ್ರಪರಿಣಾಮಗಳುಂಟಾಗುತ್ತವೆಂದು ಹಿರಿಯರು ಹೇಳುವ ಮಾತು ಸರ್ವಥಾ ಸುಳ್ಳಲ್ಲ! ಏನಿದು ವಿಚಿತ್ರ!! ನಾನಿಲ್ಲಿ ಕಾಲಿಟ್ಟದ್ದೇ ತಡ, ಕತ್ತಲೆಯೆಲ್ಲ ದಿಕ್ಕುದಿಕ್ಕಿಗೆ ಓಡಿಬಿಟ್ಟಿದೆ! ಈ ಹೂಗಳ ಸಾಲೆಲ್ಲ ಅರಳಿ ನನ್ನನ್ನೇ ಎವೆಯಿಕ್ಕದೇ ದಿಟ್ಟಿಸುತ್ತಿವೆ. ಅದೊ, ಓ ಅಲ್ಲಿ, ತುಸು ಕತ್ತಲೆ ಒಂದು ಕಾಲನ್ನು ಹೊರಗಿಟ್ಟುಕೊಂಡು, ಕತ್ತನ್ನು ತಿರುಗಿಸಿ, ಓರೆನೋಟ ದಿಂದ ಬೆದರಿಬೆದರಿ ನನ್ನನ್ನೇ ನೋಡುತ್ತ ನಡುಗುತ್ತ ನಿಂತಿದೆ! ಅಲ್ಲಿ ಕೆಲವು ಮೊಗ್ಗೆಗಳು ಇನ್ನೂ ಪೂರ್ಣವಾಗಿ ಅರಳಿಲ್ಲ. (ಕೈಕುಲುಕಿ) ಸರಿ, ಸರಿ— ಈಗ ಅಲ್ಲಿಯೂ ಬೆಳಕಾಯಿತು, ಹೂಗಳೆಲ್ಲ ಕಣ್ತೆರೆದವು! ನನ್ನ ಮೈಕಾಂತಿ ಯೇ ಹಾಗಿದೆ!! ಸರ್ವಲೋಕಗಳನ್ನೂ ತನ್ನ ಸೌಂದರ್ಯಾತಿಶಯದಿಂದ ಬೆರಗುಗೊಳಿಸಿದ ಲಾವಣ್ಯವತಿಯಾದ ರತಿದೇವಿಯನ್ನೂ ಸಹ ಮುಗ್ಧಗೊಳಿ ಸಿದ ಮೈಕಾಂತಿಯಲ್ಲವೇ ನನ್ನದು! ನಾನು ನಕ್ಕರೆ ಕೆಂದಾವರೆ ಅರಳಿದಂತೆ, ನಾನು ಕಣ್ತೆರೆದರೆ, ಪ್ರೇಮ-ಕಾಮಗಳೆಂಬ ಪೂರ್ಣಚಂದ್ರರಿಬ್ಬರು ಏಕ ಕಾಲಕ್ಕೇ ಉದಿಸಿಬಂದಂತಾಗುವುದು.

ನಾನು ಏಕಾಂಗಿಯಾಗಿ ಬಂದಿಲ್ಲ. ನನ್ನ ಹಿಮ್ಮೇಳದಲ್ಲಿ ಕೋಗಿಲೆ ಗಳು ಎಷ್ಟು ಇಂಪಾಗಿ ಪ್ರೇಮೋಲ್ಲಾಸದ ಗೀತಗಳನ್ನು ಹಾಡುತ್ತಿವೆ! ನನ್ನ ಪ್ರವೇಶದಿಂದ ಕಣ್ಣಿಗೆ ಕಾಣುವ ಕತ್ತಲೆ ತೊಲಗಿದಂತಾಯಿತು. ಇದೇನು ದೊಡ್ಡ ಕಾರ್ಯವಲ್ಲ. ಒಂದು ದೀಪವನ್ನು ತಂದರೆ ಸಾಕು, ಈ ಕೆಲಸ ಆಗುತ್ತದೆ. ಆದರೆ ನಾನೀಗ ಬಂದದ್ದು ಆ ಪುಟ್ಟ ಕೆಲಸಕ್ಕಾಗಿಯಲ್ಲ! ಕಣ್ಣಿಗೆ ಕಾಣದ ಭೀಕರ ಕಗ್ಗತ್ತಲೆ ಸರ್ವಸೃಷ್ಟಿಯನ್ನೂ ತನ್ನ ಬಾಯೊಳ ಗಿಟ್ಟುಕೊಂಡು, ಸರ್ವಹೃದಯಗಳನ್ನೂ ಅಂಧಕಾರದಿಂದ ತುಂಬಿ, ನಿಷ್ಕ್ರಿಯ ಮಾಡಿ ಕೂತುಬಿಟ್ಟಿದೆ! ಆ ಕತ್ತಲೆಯಲ್ಲಿ ಸಿಹಿಸಿಹಿಯಾದ ಭಕ್ಷ್ಯಭೋಜ್ಯ ಗಳನ್ನು ತಂದು ಬಾಯಿಗೆ ಸುರಿದರೂ ನಾಲಿಗೆಗೆ ರುಚಿಹತ್ತದು; ಸುಂದರ ವಾದ ವಸ್ತುಗಳನ್ನು ಕಣ್ಮುಂದೆ ಕುಣಿಸಿದರೂ ಕಣ್ಣಿಗೆ ಕಾಣಿಸುವುದಿಲ್ಲ; ಎಂತಹ ಮನೋಲ್ಲಾಸಕರವಾದ ಸುಗಂಧವನ್ನು ಸೂರೆಗೈದರೂ ದೇಹಕ್ಕ ದರ ಪರಿಮಳವೇ ತಾಗದು! ಮಧುರವಾದ ಸಂಗೀತವು ಅದಕ್ಕೆ ಕರ್ಣ ಕರ್ಕಶ! ಈ ಭೀಕರವಾದ ತಮದಲ್ಲಿ ಆಲಸ್ಯವೆಂಬ ದೆವ್ವವು ವೈರಾಗ್ಯದ ವೇಷ ತೊಟ್ಟುಕೊಂಡು ಸರ್ವ ಪ್ರಾಣಿಗಳ ಹೃದಯದೊಳಗೂ ಹೊಕ್ಕು ಅಲ್ಲಿರುವ ಪ್ರೇಮದ ಎಣ್ಣೆಯನ್ನು ಹೀರಿ, ಆನಂದದ ದೀಪವನ್ನು ಆರಿಸಿ

ಬಿಟ್ಟಿದೆ! ಜಗತ್ತೆಲ್ಲವೂ ಸ್ಮಶಾನ ಮೌನದಿಂದ ಅಳುಮೋರೆ ಹಾಕಿಕೊಂಡು ಕೂತಿದೆ.

ಈ ಕತ್ತಲೆಗೆ ಕಾರಣನಾದವನು ಇಲ್ಲಿಯೋ ಸಮೀಪದಲ್ಲಿಯೋ ಕೂತಿದ್ದಾನೆಂದು ನನ್ನ ಪ್ರಿಯಸೇವಕ ಮಂದಾನಿಲನು ಸುದ್ದಿ ಸಾರಿದ್ದಾನೆ. ಸಂಸಾರ ನಾಟಕದ ಸೂತ್ರಧಾರನಾದ ನಾನು ನಾಂದಿಯನ್ನು ಮುಗಿಸಿಕೊಂಡು ಬಂದು ನಿಂತಿದ್ದೇನೆ. ಆದರೆ ಆ ವ್ಯಕ್ತಿ ಸೃಷ್ಟಿಯ ರಂಗಭೂಮಿಯ ಮೇಲೆ ಕತ್ತಲೆಯ ತೆರೆಯನ್ನಿಳಬಿಟ್ಟು, ನಾಟಕ ಸುರುಮಾಡಲಿಕ್ಕೆ ಬಿಡದಂತೆ ಗಟ್ಟಿಯಾಗಿ ಹಟಹಿಡಿದು ಕೂತುಬಿಟ್ಟಿದ್ದಾನೆ! ಆತನು ಇಲ್ಲೇ ರಜತಾದ್ರಿಯಲ್ಲಿ ಕೂತಿದ್ದಾನಂತೆ. ತುಸು ಮುನ್ನಡೆದು ಹುಡುಕಿಬಿಡುತ್ತೇನೆ, ಎಲ್ಲಿದ್ದಾನೆ ನೋಡುವ!

ಇಲ್ಲಿ ಥಳಥಳಿಸುವ ರಜತಾದ್ರಿ ಶಿಖರ ।
ಇಲ್ಲಿ ಹೊಳೆಹೊಳೆಯುತಿದೆ ಮಾನಸದ ಮುಕರ!

ಇದೊ! ಹಿಮರಾಜನ ಶಿರೋರತ್ನದಂತೆ ರಜತಾದ್ರಿ ಇಲ್ಲೇ ಥಳಥಳಿಸುತ್ತಿದೆ! "ಹಿಮಾಲಯೋ ನಾಮ ನಗಾಧಿರಾಜಃ"! ಆಹಾ, ಎಷ್ಟು ಸತ್ಯವಾದ ಮಾತು! ಸರ್ವ ತಪಸ್ವಿಗಳಿಗೂ, ಸಮಸ್ತ ದೇವತಾತ್ಮಗಳಿಗೂ ನಿಜವಾಗಿಯೂ ಇದೊಂದು ಆವಾಸಸ್ಥಾನವಾದ ಪರ್ವತರಾಜ! ಇಪ್ಪತ್ತು ಸಾವಿರ ಅಡಿಗಳ ಎತ್ತರದ ಮೇಲೆ ಸ್ಫಟಿಕದಿಂದಲೇ ನಿರ್ಮಿಸಿದ ದೊಡ್ಡ ಗೋಪುರದಂತಿದೆ ಈ ರಜತಾದ್ರಿ! ಏನು ವಿಚಿತ್ರ ಇದು! ಬೆಳ್ಳಿಯಿಂದಲೇ ಮಾಡಿದ ಮಹಾಪರ್ವತ! ಸರ್ವಸೃಷ್ಟಿಗೂ ಮೂಲಾಧಾರವಾದ ವೀರ್ಯಸಾರವೇ ಇಲ್ಲಿ ವಜ್ರದ ಗಿರಿಯಂತೆ ಹೆಪ್ಪುಗಟ್ಟಿ ದೊಡ್ಡ ಬೆಟ್ಟವಾಗಿ ಕೂತಿದೆ! ಇದರ ಪಾದವನ್ನು ತೊಳೆಯುತ್ತಿರುವ ಈ ಮಾನಸ ಸರೋವರ! ವಿಸ್ತಾರವಾಗಿ ಹಾಸಿರುವ ನಿರ್ಮಲವಾದ ದೊಡ್ಡ ಕನ್ನಡಿಯಂತೆ ಹೇಗೆ ಥಳಥಳಿಸುತ್ತಿದೆ!! ದೇವಲೋಕದ ಅಮೃತರಸವೆಲ್ಲ ಇಲ್ಲಿ ಈ ಕೆರೆಯ ರೂಪದಿಂದ ಹರಹಿಕೊಂಡಿದೆ. ಇದರ ಒಂದು ಬಿಂದುವನ್ನು ಪಾನಮಾಡಿದರೆ ಸಾಕು, ಸರ್ವ ರೋಗಗಳೂ ಪರಿಹಾರ! ಇದರಲ್ಲಿ ಮುಳುಗುವ ದುರ್ಬಲದೇಹಿಯೂ ಕೂಡಾ ವಜ್ರಕಾಯನಾಗಿ ಹೊರಬರುತ್ತಾನೆ!! ಇಲ್ಲಿಯ ಈ ಮೃದುವಾದ ತಂಗಾಳಿ, ಎಷ್ಟೊಂದು ಹರಿತವಾದ ತಂಪಿನಿಂದ ಬಂದು ಮೈಯಲ್ಲಿಯ ಆಲಸ್ಯವನ್ನು ಚುಚ್ಚಿ ಓಡಿಸುತ್ತದೆ! ಆದ್ದರಿಂದಲೇ

ಇದುವೆ ನಿರ್ವಿಷಯ ವಾತಾವರಣ ಧರಣಿ!
ಇದೇಕೊ! ಉರಿಯಿಲ್ಲದೆಯೆ ಉರಿಯುವನು ತರಣಿ ||

ಈ ಪ್ರದೇಶವು ನಿರ್ವಿಷಯದ ತವರ್ಮನೆಯಾಗಿದೆ. ಇಲ್ಲಿ ಕಾಲಿಟ್ಟೊಡನೆಯೇ ಎಲ್ಲ ಕಾಮನೆಗಳೂ ತಾವಾಗಿಯೇ, ಸೂರ್ಯನ ಮುಂದಿನ ಮಂಜಿನಂತೆ, ದೀಪದ ಮುಂದಿನ ಕತ್ತಲೆಯಂತೆ, ಮಾಯವಾಗುತ್ತಿವೆ. ಇದೇನು ವಿಚಿತ್ರ? ಸುಡುವುದೇ ಸ್ವಭಾವವಾಗಿರುವ ಬೆಂಕಿಯೂ ಕೂಡ ಇಲ್ಲಿ ತನ್ನ ಹುಟ್ಟುಗುಣವನ್ನೇ ಬಿಟ್ಟುಬಿಡುವಂತೆ ತೋರುತ್ತದೆ. ಮಹಾಸಾಗರಗಳನ್ನೂ ಸಾವಿರಾರು ಮಹಾನದಿ, ಸರೋವರಗಳನ್ನೂ ತನ್ನ ಪ್ರಖರವಾದ ಕಿರಣಗಳಿಂದ ಬತ್ತಿಸುವ ಈ ಸೂರ್ಯನು ಇಲ್ಲಿ ತನ್ನ ಉರಿಯನ್ನೇ ಕಳೆದುಕೊಂಡು, ಬೆಳಗುತ್ತಿದ್ದಾನೆ! ಋಷಿಯ ಸಾನ್ನಿಧ್ಯದಲ್ಲಿ ಕೋಪವನ್ನು ಕಳೆದುಕೊಂಡ ಕ್ಷತ್ರಿಯರಾಜನಂತೆ, ಈ ರಜತಾದ್ರಿಯ ಮುಂದೆ ಸೂರ್ಯನು ತನ್ನ ಪ್ರಖರತೆಯನ್ನೆಲ್ಲ ತೆಗೆದೊಗೆದು, ಮುಟ್ಟಿದರೂ ಸುಡದ ಬೆಂಕಿಯಂತೆ ಜ್ವಲಿಸುತ್ತಿದ್ದಾನೆ! ಇಂತಹ ಅಲೌಕಿಕವಾದ ಈ ಹಿಮಾಚಲ ಶ್ರೇಣಿಯು ನಿಜವಾಗಿಯೂ ದೇವತೆಗಳ ಜನ್ಮಭೂಮಿಯೇ ಸರಿ. ಆದ್ದರಿಂದಲೇ,

ಇಲ್ಲಿರುವನಂತೆ ಶಿವ ತಪದಿ ವೈಮರಿತು—|
ಒಲ್ಲೆ ಲೋಕತ್ರಯವನೆಂಬ ಛಲವೆರೆತು ||

ಸತೀ ವಿಯೋಗದಿಂದ ಸಂಸಾರದ ಅಸಾರತೆಗೂ ಅದರ ವಿಷಯ ಸುಖದ ಕ್ಷಣಿಕತೆಗೂ ಬೇಸತ್ತ ಶಿವನು, ವಿರಕ್ತಭಾವದಿಂದ ಬಂದು ಇಲ್ಲಿ ಕೂತು ಘೋರತರವಾದ ತಪಸ್ಸನ್ನು ಆಚರಿಸುತ್ತಿರುವನಂತೆ. ವಿಷಯ ವಾಸನೆಯ ಸುಳುಹೇ ಇಲ್ಲದ ಈ ಪುಣ್ಯಪ್ರದೇಶವನ್ನು ಆತನು ಅದಕ್ಕಾಗಿಯೇ ಆರಿಸಿಕೊಂಡಿರಬೇಕು! ಮೂರು ಲೋಕವನ್ನೂ ನಾನೊಲ್ಲೆ ಎಂಬ ಛಲವನ್ನು ಹಿಡಿದು ಆ ಮಹಾನುಭಾವನು, ಸೃಷ್ಟಿಯ ಸಂಸಾರಕಾರ್ಯವನ್ನೆಲ್ಲ ದೂರರಿಸಿ ಬಂದು ಕೂತಿದ್ದಾನೆ! ಆತನ ಈ ಛಲ ವ್ರತದಿಂದ ಲೋಕಕ್ಕೆ ಎಂತಹ ಅನರ್ಥವಾಗಿದೆ! ಆದ್ದರಿಂದ,

ಎಲ್ಲಿರುವನೆಲ್ಲಿರುವ ಹುಡುಕಿ ಬಹೆನೀಗ—|
ಫುಲ್ಲ ಸುಮಶರದಿಂದಲೆಚ್ಚರಿಪೆ ಬೇಗ ||

ಆತನು ಈ ಪರ್ವತಪ್ರದೇಶದಲ್ಲಿ ಯಾವ ಕಡೆಯಲ್ಲಿ ಕುಳಿತುಕೊಂಡು ತಪಸ್ಸು ಮಾಡುತಿದ್ದಾನೆಂದು ಹುಡುಕಬೇಕಾಗಿದೆ. ಈ ರಜತಾದ್ರಿಶ್ರೇಣಿ ಸಾಮಾನ್ಯವಾದದ್ದಲ್ಲ. ಇಲ್ಲಿಯ ವರೆಗೆ ಬರುವುದೇ ನನಗೆ ಸಾಕುಬೇಕಾಗಿ ಹೋಗಿದೆ. ಈ ಭಯಂಕರವಾದ ಹಿಮ, ಮೈಯನ್ನು ಸಾವಿರ ಸೂಜಿಗಳಿಂದ ಏಕಕಾಲಕ್ಕೇ ಚುಚ್ಚುವಂತೆ ಬಂದು ಕೊರೆಯುತ್ತಿರುವ ಈ ಚಳಿಗಾಳಿ, ಗೋಡೆಯಂತೆ ಕಡಿದಾಗಿರುವ ಈ ಏರುದಾರಿ, ಅಬಬಾ! ಅಲ್ಲಲ್ಲಿ ಹಿಮದ ಹಚ್ಚಡವನ್ನು ಹೊದ್ದುಕೊಂಡಿರುವ ದೊಡ್ಡ ದೊಡ್ಡ ಬಂಡೆಗಲ್ಲುಗಳನ್ನು ಏರುತ್ತ ಹೋಗಬೇಕು. ತುಸು ಜಾರಿದರೆ ಸಾಕು. ಸಾವಿರ ಸಾವಿರ ಅಡಿ ಕೆಳಗಿನ ಭೀಕರವಾದ ಕಂದರಕ್ಕೆ ಬೀಳಬೇಕಾಗುವುದು! ಇಲ್ಲಿ ಅನೇಕ ಗವಿಗಳು ಕಾಣಿಸುತ್ತಿವೆ. ಕೆಲವನ್ನು ತೆಳ್ಳನೆಯ ಹಿಮವು ಪರದೆಯಂತೆ ಪೂರ್ಣವಾಗಿ ಮುಚ್ಚಿಕೊಂಡಿದೆ. ಗವಿಯ ಬಾಯಿಯೊಳಗಿನ ಕತ್ತಲೆಯು ನಯವಾದ ಬಟ್ಟೆಯನ್ನು ಸುತ್ತಿದ ಕತ್ತಿಯಂತೆ ಕಾಣುತ್ತಿದೆ; ಹತ್ತಿರ ಹೋಗಲಿಕ್ಕೇ ಭಯ! ಇನ್ನು ಕೆಲವು ಗುಹೆಗಳು ಅರ್ಧ ಮುಚ್ಚಿಕೊಂಡಿವೆ. ಇವುಗಳ ದ್ವಾರಗಳ ಅಚೀಚೆ ಅಚ್ಚಬಿಳಿಯ ಕರಡಿಗಳಂತಹ ಪ್ರಾಣಿಗಳು ಕೂತು ತೂಕಡಿಸುತ್ತಿವೆ! ಕೆಲವು ಗುಹೆಗಳ ಒಳಮಗ್ಗುಲಲ್ಲಿ ಸಮುದ್ರ ಘೋಷದಂತಹ ಶಬ್ದವು ಒಂದೇಸವನೆ ಕೇಳಿಬರುತ್ತಿದೆ! ಪ್ರಾಣಾಯಾಮದ ಪ್ರಥಮಪಾದದಲ್ಲಿ ಕುಂಭಕಕ್ಕಿಳಿಯುವ ಪ್ರಾಣವಾಯುವಿನಂತೆ ಕೆಲವು ಗವಿಗಳಲ್ಲಿ ಒಂದು ಬಗೆಯ ತಡಮರಿಸುವ ಮಧುರ ನಾದ ಕೇಳಿಬರುತ್ತಿದೆ. ಅಮೃತದಂತಹ ತಿಳಿನೀರಿನ ಧಾರೆ ಈ ಗುಹೆಗಳ ಒಳಗೋಡೆಗಳಲ್ಲಿ ಚಿಮ್ಮಿ ಕೆಳಗುರುಳುತ್ತಿರಬೇಕಲ್ಲವೆ? ಆಗಲಿ ನೋಡೋಣ. ಓಹೋ, ಏನು ಸುಗಂಧವಿಲ್ಲಿ? ಈ ಸುಗಂಧದೊಂದಿಗೆ ನಿಟ್ಟುಸಿರಿನ ಧ್ವನಿ! ಕಸ್ತೂರಿ ಮೃಗಗಳು ಇಲ್ಲಿ ವಿಶ್ರಾಂತಿಹೊಂದುತ್ತಿರಬೇಕು! ಇಲ್ಲಿ ಶಿವನಿಲ್ಲ! ನೋಡೋಣ, ಅದೋ ಅಲ್ಲೊಂದು ಏರುಜಾಗದಲ್ಲಿ ಗುಹೆ ಕಾಣಿಸುತ್ತಿದೆ! ಅದರ ಮುಂದೆಯೇ ಒಂದು ಹೂಬಳ್ಳಿಗಳ ತೋಪು ಇದ್ದಂತೆ ತೋರುತ್ತದೆ. ನೋಡೋಣ—

ಓಹೋ ಕೂತಿಹನಿಲ್ಲಿ । ಚೆಲ್ವಿನ ಬಳ್ಳಿ । ತಳಿರ ತಣ್ಣೆಳಲಲ್ಲಿ ॥

ಧನ್ಯ! ನಾನು ಪರಮ ಧನ್ಯ! "ಅದ್ಯ ಮೇ ಸಫಲಂ ಜನ್ಮ । ಅದ್ಯ ಮೇ ಸಫಲಂ ತಪಃ" ಇಲ್ಲಿಯವರೆಗೆ ಪಟ್ಟ ಪರಿಶ್ರಮವೆಲ್ಲ ಸಫಲವಾದಂತಾಯಿತು. ಇನ್ನು ನಾನು ಪಡೆಯಬೇಕಾದದ್ದೇನೂ ಇಲ್ಲ. ನನ್ನ ಈ ನಶ್ವರ

ವಾದ ದೇಹವು ಈಗಲೇ ಹಿಮಗಟ್ಟಿ ಉರುಳಿಬಿದ್ದರೂ ಚಿಂತೆಯಿಲ್ಲ. ಈ ಪುಣ್ಯಭೂಮಿಯಲ್ಲಿ, ಈ ಮಹೇಶ್ವರನ ದಿವ್ಯಸನ್ನಿಧಿಯನ್ನು ಕಂಡ ಮೇಲೆ ಯಾರಿಗೆ ತಾನೇ ಇನ್ನೇನು ಬಯಕೆ ಉಳಿದೀತು?

ಒಬ್ಬನನ್ನು ಹೊರಹಾಕುವುದರಿಂದ ಒಂದು ಕುಟುಂಬ ಬದುಕುವುದಾದರೆ, ಒಂದು ಕೇರಿಯ ತ್ಯಾಗದಿಂದ ಇಡೀ ಊರೇ ಉಳಿಯುವುದಾದರೆ, ಒಂದು ಊರನ್ನು ಕೊಟ್ಟು ಇಡೀ ನಾಡನ್ನೇ ಉಳಿಸಿಕೊಳ್ಳುವುದಾದರೆ, ಅದಕ್ಕೆ ಹಿಂಜರಿಯಬಾರದು. ಸಣ್ಣ ನಷ್ಟವನ್ನು ಸಹಿಸಿಕೊಂಡು ದೊಡ್ಡ ನಷ್ಟವನ್ನು ತಪ್ಪಿಸಿಕೊಳ್ಳಬೇಕು. ಇದು ಸರ್ವಕಾಲಕ್ಕೂ, ಸರ್ವವಿಚಾರವಂತರಿಗೂ ಸಮ್ಮತವಾದ ಸದಭಿಪ್ರಾಯವೇ ಸರಿ. ಆದ್ದರಿಂದ ನನ್ನೊಬ್ಬನಿಗೆ ಎಷ್ಟು ಕಷ್ಟವಾದರೂ ನಾನದನ್ನು ಸಹಿಸಿಕೊಳ್ಳಲು ಸಿದ್ಧನಾಗಿಯೇ ಬಂದಿದ್ದೇನೆ. ಲೋಕದ ಸಮಸ್ತ ಜನತೆಯೂ ಎಲ್ಲ ಕರ್ಮವನ್ನೂ ಬಿಟ್ಟುಕೊಟ್ಟು, ಅನ್ನಪಾನಗಳನ್ನು ಕಡೆಗಣಿಸಿ, ಪ್ರೇಮದ ರಸವನ್ನೇ ಬತ್ತಿಸಿಕೊಂಡು, ಸೃಷ್ಟಿಯನ್ನೇ ಒಣಗಿಸುತ್ತ ಕೂತಿದೆ. ಈ ಮಹಾನಾಶವನ್ನು ತಪ್ಪಿಸಲು, ಈ ಪರಶಿವನನ್ನು ಎಚ್ಚರಿಸಿ, ಕಾರ್ಯೋನ್ಮುಖವಾಗಿ ಮಾಡಿದರೆ, ನಾನು ಧನ್ಯ. ಈ ಸತ್ಕಾರಕ್ಕೆ ನನ್ನನ್ನೇ ನಾನು ಬಲಿಗೊಡಲು ಸಿದ್ಧನಾಗಿ ಬಂದಿದ್ದೇನೆ. ಅಂದಮೇಲೆ ಈ ಪರ್ವತಾರೋಹಣ, ಈ ಹಿಮರಾಶಿಯ ನಡುವೆ ಓಡಾಟ, ಈ ಭೀಕರವಾದ ಚಳಿಗಾಳಿಯ ಮೈ ಕೊರೆತ ಎಷ್ಟರದ್ದು? ಕಂಡೆ! ಆ ಪರಮೇಶ್ವರನನ್ನು ಇದೋ ಇಲ್ಲಿ ಕಂಡೆ!! ಕೆಂಪಾದ ಚಿಗುರುಗಳಿಂದ ತುಂಬಿ, ಹಸುಗೂಸಿನ ಕೆಂಪು ಕಪೋಲಗಳಂತೆ ಬಹು ಮುದ್ದಾಗಿ ತೋರುವ ಹೂಬಳ್ಳಿಗಳ ಹಂದರದಡಿಯಲ್ಲಿ ಕೂತಿರುವ ಈ ಮೂರ್ತಿಯನ್ನು ಕಂಡ ನಾನು ಧನ್ಯನಾದೆ! ಜಗತ್ತಿನ ಚಳಿ ಎಲ್ಲವೂ ಬಂದು ಕೂತಿರುವ ಈ ಅತ್ಯಂತ ಹಿಮಪ್ರದೇಶದಲ್ಲಿಯೂ ತಂಪಾದ ತಳಿರ ಚಪ್ಪರ! ಅಹಹಾ! ತಾನು ಧರಿಸಿಕೊಂಡಿರುವ ಮಹಾ ತೇಜಸ್ಸಿನ ಉಷ್ಣವನ್ನು ಸಹಿಸಿಕೊಳ್ಳಲು ಈ ಪರಶಿವನಿಗೆ ಎಷ್ಟು ತಂಪಿದ್ದರೂ ಸಾಲದಲ್ಲ! ಹ್ಯಾಗೆ ಕೂತಿದಾನೆ ಈ ಜ್ಯೋತಿರ್ಮೂರ್ತಿ!

ವ್ಯಾಘ್ರಾಜಿನದ ಮೇಲೆ । ಪದ್ಮಾಸನದಿ । ಕೂತುಕೊಂಡಿಹ ಲೀಲೆ ॥

ಹೆಬ್ಬುಲಿಯ ಚರ್ಮವನ್ನು ಹಾಸಿಕೊಂಡಿದ್ದಾನೆ. ಸನ್ಯಾಸಿಗಳ ಸುಪ್ಪತ್ತಿಗೆಯೇ ಹುಲಿಚರ್ಮವಲ್ಲವೆ? ಸುಖಸಂಪತ್ತಿನ ಲೌಕಿಕಸಂಸಾರ

ಜೀವನವನ್ನೆಲ್ಲನೆಂದು ತ್ಯಜಿಸಿ ಬರುವ ವಿರಕ್ತ ಶಿಖಾಮಣಿ ಇರುವುದೇ ಹೀಗಲ್ಲವೆ? ಈ ವ್ಯಾಘ್ರಾಜಿನದ ಮೇಲೆ ಇದೆಂತಹ ಅಪೂರ್ವವಾದ ಕೆಂದಾವರೆ ಅರಳಿದೆ! ಇದೇನು ವಿಚಿತ್ರ! ನೀರಿನಲ್ಲಿ, ಸರೋವರದಲ್ಲಿ, ಪದ್ಮಪುಷ್ಪ ಅರಳುತ್ತದೆಂಬುದು ಲೋಕದಲ್ಲಿ ನಡೆಯುವ ಸಹಜ ವ್ಯಾಪಾರ. ಆದರೆ, ಶೀರ ಅಲೌಕಿಕವಾಗಿರುವ ಈ ಪುಣ್ಯಭೂಮಿಯಲ್ಲಿ ನೆಲದ ಮೇಲೂ ತಾವರೆ ಅರಳುತ್ತದೆ! ಆಶ್ಚರ್ಯವಲ್ಲ! ಮಹಿಮಾಶಾಲಿಗಳಾದವರು ಕೂತಲ್ಲಿ ಕಲ್ಲು ಕರಗುತ್ತದೆ, ಮುಳ್ಳು ಹೂವಾಗಿ ಅರಳುತ್ತದೆ. ಈ ದೇವಾಧಿದೇವನು, ಈ ಪರಶಿವನು, ಕೂತಿರುವ ರೀತಿಯೇ ಒಂದು ತಾವರೆಯು ಅರಳಿ ಕೊಂಡಂತಿದೆಯಲ್ಲ! ಈತನ ಈ ಕೂತುಕೊಳ್ಳುವ ರೀತಿಯನ್ನು ನೋಡಿಯೇ ಜಗಜ್ಜನರು ಇದಕ್ಕೆ ಪದ್ಮಾಸನವೆಂದು ಕರೆದಿರಬೇಕು. ಇದಕ್ಕೆ ಸಂದೇಹವೇ ಇಲ್ಲ. ಏನಿದು! ಎಂಥ ವಿಶ್ವರೂಪದರ್ಶನ ಇದು!

ಬ್ರಹ್ಮಾಂಡಗಳ ಮಾಲೆ । ಕಂಠದಿ, ಕೈಲಿ
ತ್ರಿಗುಣ ತ್ರಿಶೂಲ ಜ್ವಾಲೆ ।।

ಈ ಮಹಾಮೂರ್ತಿಯ ಕಂಠದಲ್ಲಿ ಇದೆಂತಹ ಅದ್ಭುತವಾದ ಮಾಲೆ! ಈ ಮಾಲೆಯು ಒಂದೊಂದು ಮಣಿಯೂ ಒಂದೊಂದು ಸೂರ್ಯಮಂಡಲದಂತೆ ಝುಗಝಿಗಿಸುತ್ತಿದೆ! ನಿಜವಾಗಿಯೂ ಇವು ಮಣಿಗಳಲ್ಲ, ಬ್ರಹ್ಮಾಂಡಗಳು! ಬ್ರಹ್ಮಾಂಡಗಳನ್ನು ಆಕಾಶವೆಂಬ ದೊಡ್ಡ ದಾರಕ್ಕೆ ಪೋಣಿಸಿಕೊಂಡು, ಕಂಠದಲ್ಲಿ ಧರಿಸಿಕೊಂಡು ಯೋಗಲೀಲೆಯಲ್ಲಿ ಕೂತಿದ್ದಾನೆ ಈ ಮಹಾದೇವ! ದೃಷ್ಟಿದೋಷವುಳ್ಳವರಾದ ಅಲ್ಪ ಮಾನವರಿಗೆ ಈತನ ಈ ಅದ್ಭುತಹಾರವು ರುಂಡಗಳ ಮಾಲೆಯಾಗಿ, ತಲೆಬುರುಡೆಗಳ ಸರವಾಗಿ ಕಾಣುತ್ತದೆ! ಆಹಹಾ ಏನು ವಿಚಿತ್ರ! ನಮ್ಮ ಭಾವನೆಗನುಗುಣವಾದ ಚಿತ್ರವನ್ನು ನಾವು ಕಾಣುತ್ತೇವೆಂಬ ಮಾತು ಸರ್ವಥಾ ಸುಳ್ಳಲ್ಲ. ಈತನ ಕೈಯಲ್ಲಿ ಇದೆಂತಹ ಅದ್ಭುತಾಕಾರದ ಆಯುಧವಪ್ಪಾ! ತ್ರಿಶೂಲವನ್ನೀತನು ಹಿಡಿದಿರುತ್ತಾನೆಂದು ಕೇಳಿದ್ದೇನೆ. ಇದು ತ್ರಿಶೂಲವೇನೋ ಹೌದು. ಮೂರು—ಶೂಲಗಳು—ಅಂದರೆ, ಮೂರು ರೀತಿಯಿಂದ ಇರಿಯುವ ಶೂಲವಿದು. ನಿಜ, ನಿಜ. ಈ ಲೋಕದ ಜನರನ್ನು ಸತ್ವ—ರಜ—ತಮ ಎಂಬ ಮೂರು ಗುಣಗಳು ಇರಿಯುತ್ತಿವೆ ಎಂಬುದು ಸುಳ್ಳಲ್ಲ. ಈ ತ್ರಿಗುಣಗಳನ್ನು ಮೀರಿದವರನ್ನು ಶಿವನ ತ್ರಿಶೂಲವು ಸರ್ವಥಾ ಇರಿಯಲಾರದು.

ಸುತ್ತು ಸುತ್ತಿದೆ ಸರ್ಪ । ಸರ್ವಾಂಗವನ್ನೆ । ಎತ್ತಿ ಹೆಡೆಯ ದರ್ಪ ॥

ಎಂತಹ ಅದ್ಭುತ ಇದು! ಓಹೋ ಹೋ! ಈತನ ದೇಹದ ಯಾವ ಅಂಗವನ್ನು ನೋಡಿದರೂ ಬುಸುಗುಟ್ಟುವ ಸರ್ಪವು ಸುತ್ತಿಕೊಂಡಿದೆ. ಅವು ಹೇಗೆ ಹೆಡೆಗಳನ್ನು ಬಿಚ್ಚಿಕೊಂಡು, ರತ್ನದ ಮಣಿಗಳಂತಿರುವ ಕಣ್ಣುಗಳನ್ನು ತೆರೆದು, ಈತನ ಅಂಗಗಳನ್ನು ಸದಾ ಕಾಯುತ್ತಿವೆ! ಯಾರಿಗೆ ತಾನೆ ಇಂತಹ ಕಾವಲನ್ನು ಸರಿಸಿ, ಶಿವನನ್ನು ಮುಟ್ಟಿ ಎಚ್ಚರಿಸಲು ಸಾಧ್ಯವಾದೀತು? ಮುಟ್ಟುವ ಮಾತಂತಿರಲಿ, ಸಮೀಪಕ್ಕೆ ಹೋಗಲಿಕ್ಕೆ ಸಹಾ ಸಾಧ್ಯವಾಗದು! ಸುತ್ತುಮುತ್ತಿನ ವಿಶಾಲಪ್ರದೇಶದ ಗಾಳಿಯನ್ನೆಲ್ಲ ಈ ಸರ್ಪಗಳು ತಮ್ಮ ಪೂತ್ಕಾರದಿಂದ ವಿಷವಾಯುವಾಗಿ ಮಾಡಿಬಿಟ್ಟಿವೆ. ಅಹಹಾ! ಎಷ್ಟೊಂದು ನಿಷ್ಠೆಯಿಂದ ಶಿವನ ತಪಸ್ಸು ಕೆಡಿಸಲ್ಪಡದಂತೆ ಇವು ಕಾದುಕೂತಿವೆ! ಆದ್ದರಿಂದಲೇ,

ನಾಸಾಗ್ರದಲಿ ದೃಷ್ಟಿ । ಅರೆಮುಚ್ಚಿ ಮೆಚ್ಚಿ । ಕಡೆಗಣಿಸಿದೆ ಸೃಷ್ಟಿ ॥

ಈ ಪರಾತ್ಪರ ಮೂರ್ತಿ, ಕಣ್ಮುಚ್ಚಿಕೊಂಡಂತೆ ತನ್ನ ದೃಷ್ಟಿಯನ್ನು ಮೂಗಿನ ತುದಿಯ ಮೇಲೆ ಕೇಂದ್ರೀಕರಿಸಿಕೊಂಡು, ಮಧುರವಾದ ಸಮಾಧಿಯ ಅಮೃತಪಾನದಲ್ಲಿ ತನ್ಮಯನಾಗಿ, ಬ್ರಹ್ಮಾನಂದಲೀಲೆಯಿಂದ ಕೂತುಬಿಟ್ಟಿದೆ. ಸರ್ವ ಲೋಕಗಳನ್ನೂ ತೃಣಕ್ಕಿಂತಲೂ ಕಡೆಯಾಗಿ ತಿರಸ್ಕರಿಸಿ ಕೂತಿರುವ ಈ ದೇವದೇವನ ಈ ಸುಖಾಸೀನತೆ ನಿಜವಾಗಿಯೂ ಅದ್ಭುತವೇ ಸರಿ!

ಆದಿಶಕ್ತಿಯ ಬೀಜ । ಭ್ರೂಮಧ್ಯ ಜ್ಯೋತಿ । ನೇತ್ರವಾಗಿದೆ ತೇಜ ॥

ಓಹೋ, ಅಗೋ! ಇದೇನು ಮತ್ತೊಂದು ಮಹಾದ್ಭುತ! ಹಣೆಯ ನಡುವೆ ಹುಬ್ಬುಗಳು ಕೂಡುವೆಡೆ, ಎಂತಹ ತೀಕ್ಷ್ಣವಾದ ಜ್ಯೋತಿಯೊಂದು, ಗಾಜಿನ ಆವರಣದೊಳಗಿನ ವಿದ್ಯುದ್ದೀಪದಂತೆ, ಹೊಳೆಯುತ್ತಿದೆ! ಲೋಕದ ಜನರು ಇದರ ಸುದ್ದಿಯನ್ನು ಕೇಳಿಯೇ ಶಿವನಿಗೆ ಮುಕ್ಕಣ್ಣ ಎಂದಿರಬೇಕು. ನಿಜವಾಗಿಯೂ ಇದು ಈ ಮಾಂಸಮಯವಾದ ಕಣ್ಣಲ್ಲ. ಜಗತ್ತಿನ ವೀರ್ಯ ತೇಜಸ್ಸನ್ನೆಲ್ಲ ತನ್ನ ತಪೋಸೂರ್ಯನ ಅಸಂಖ್ಯ ಕಿರಣಗಳಿಂದ ಸೆಳೆದುಕೊಂಡು ಇಲ್ಲಿ ಸಂಗ್ರಹಮಾಡಿಕೊಂಡು ಕೂತಿದ್ದಾನೆ! ಸೃಷ್ಟಿಯ ಮೂಲಬೀಜವೇ ಇಲ್ಲಿ ಜ್ಯೋತಿರ್ಲಿಂಗವಾಗಿ ಪ್ರಕಾಶಿಸುತ್ತಿದೆ. ಇದನ್ನರಿಯದ

ಅಜ್ಞರು, ಈ ದಿವ್ಯಜ್ಯೋತಿಯನ್ನು ಶಿವನ ಮೂರನೆಯ ಕಣ್ಣಿಂದು ಭ್ರುವಿಸಿಬಿಟ್ಟಿದ್ದಾರೆ.

ಈ ಪರಶಿವನು ಹೀಗೆ ಸೃಷ್ಟಿಯ ಶಕ್ತಿಯನ್ನೆಲ್ಲ ಸೆಳೆದುಕೊಂಡು ಕೂತಿರುವುದರಿಂದ ಲೋಕವೆಲ್ಲವೂ ಸೂರ್ಯನಿಲ್ಲದ ಆಕಾಶದಂತೆ, ನಿಶ್ಶಕ್ತಿಯ ಮಹಾಂಧಕಾರದಲ್ಲಿ ನರಳುತ್ತಿದೆ. ಈತನ ಮಹಿಮೆಯನ್ನು ಹೀಗೆಯೇ ಹೊಗಳುತ್ತ ಹೋದರೆ, ಲೋಕವು ಇನ್ನೂ ನಾಶಹೊಂದುವುದೇ ಸರಿ. ಯಾಕೆಂದರೆ ಈತ ಈಗಾಗಲೇ ಏನು ಮಾಡಿಬಿಟ್ಟಿದ್ದಾನೆಂದರೆ—

ರೂಪರಸಗಂಧ ಸೌಂದರ್ಯಸೃಷ್ಟಿಯನೆಲ್ಲ ! ಕುಟ್ಟಿ ಹುಡಿಗೈದನೀತ ॥

ಸ್ವೇದಜ, ಅಂಡಜ, ಉದ್ಭಿಜ, ಜರಾಯುಜ ಎಂಬುದಾಗಿ ನಾಲ್ಕು ರೀತಿಯಿಂದ ಬಗೆಬಗೆಯ ಶರೀರ ಧಾರಣೆಮಾಡಿಕೊಂಡು, ಕಣ್ಣಿಗೆ ಕಾಣುವ ಸಿಹಿ –ಕಹಿ- ಹುಳಿ–ಒಗರು– ಖಾರ–ಉಪ್ಪುಗಳೆಂಬ ಷಡ್ರಸಾನ್ನವನ್ನುಂಡು, ಪ್ರೇಮ--ಕಾಮ--ಕೋಪ--ತಾಪಗಳೇ ಮೊದಲಾದ ಮಾನಸಿಕ ನವರಸ ಸುಖಲೀಲೆಯಲ್ಲಿ ಕ್ರೀಡಿಸುತ್ತ, ಸೃಷ್ಟಿಯನ್ನು ಪೋಷಿಸಿ, ಬಳೆಸುತ್ತ, ನಲಿದಾಡುತ್ತಿದ್ದ ಸರ್ವಜೀವರೂಪಗಳನ್ನೂ, ಅವುಗಳ ವರ್ಣರಂಜಿತ ಸೌಂದರ್ಯವಿಲಾಸಗಳನ್ನೂ ಈತನು ವೈರಾಗ್ಯವೆಂಬ ಮಹಾಯುಧದಿಂದ ಕುಟ್ಟಿ, ಪುಡಿಪುಡಿ ಮಾಡಿ, ನಿರಾಕಾರರಸವಾಗಿ ಕರಗಿಸಿಬಿಟ್ಟಿದ್ದಾನೆ! ಮತ್ತೇನು ಮಾಡಿದ್ದಾನೆಂದರೆ—

ತಾಪಸೋತ್ತಮನಾಗಿ ! ಕೂತು ನಿಷ್ಕ್ರಿಯನಾಗಿ !
ಮರುಗಿಸಿದ ಜೀವಜಾತ ॥

ಕರ್ಮವನ್ನೆಲ್ಲ ತ್ಯಾಜ್ಯಮಾಡಿ, ಯಾವ ವ್ಯಾಪಾರಕ್ಕೂ ಮನಸ್ಸು ಹಾಕದೆ ನಿಷ್ಕ್ರಿಯ ತಪಸ್ವಿಯಾಗಿ ತಣ್ಣಗೆ ಕೂತು, ಸರ್ವಜೀವಜಾತಗಳನ್ನೂ ಈತ ಮರುಗಿಸುತ್ತಿದ್ದಾನೆ. ಕೊರಗಿಸುತ್ತಿದ್ದಾನೆ! ಈ ಕ್ರೂರಲೀಲೆಯನ್ನು ಕಂಡು—

ಪ್ರೇಮಕಾರುಣ್ಯ ಶೃಂಗಾರ ಜೀವಾಧಾರ । ಸೃಷ್ಟಿ ಸರ್ವಸ್ವ ಸಂಸಾರ ॥
ಮಾರಾವತಾರ ಜೀವಾತ್ಮಮೋಹಾಕಾರ । ನಿಷ್ಕ್ರಿಯ ವಿರಕ್ತಿ ಸಂಹಾರ ॥

"ನಾನು ವಸುಧೈವ ಕುಟುಂಬಕ"ನು! ಪ್ರೇಮ, ಕರುಣೆ, ಶೃಂಗಾರ ಎಂಬ ತ್ರಿವೇಣಿ ಸಂಗಮವಾದ ಈ ಲೋಕಸಂಸಾರವೆಲ್ಲವೂ ನನ್ನ ಸಂಸಾರ

ಪ್ರೇಮದ ಕಣ್ತೆರೆಸಿ, ಜೀವಜಾತಗಳನ್ನೆಲ್ಲ ಅರಳಿಸಿ, ಅವುಗಳಲ್ಲಿ ಕರುಣೆಯೆಂಬ ಮಕರಂದವನ್ನು ಎರೆದು, ಶೃಂಗಾರವೆಂಬ ಬಗೆಬಗೆಯ ಬಣ್ಣಬಣ್ಣದ ದಳಗಳ ಸೌಂದರ್ಯವನ್ನು ಬೆಳಗಿಸಿ, ಪಾಲಿಸಿಕೊಂಡು ಬಂದಿದ್ದೇನೆ. ಸೃಷ್ಟಿಯ ಈ ಸಕಲಜೀವರಾಶಿಗಳಿಗೂ ನಾನೇ ಆಧಾರವಾಗಿದ್ದುಕೊಂಡು, ಅವುಗಳ ಏಳಿಗೆಯ ಕಾರ್ಯಕ್ಕೆ ಉತ್ಸಾಹವನ್ನೀಯುತ್ತ ಕಣ್ಣಿಗೆ ಕಾಣದ ಸೂತ್ರಧಾರನಾಗಿ ಅವಿತು ಆಡಿಸುತ್ತಿದ್ದೇನೆ. ನನ್ನ ಕಣ್ಣೆದುರಿನಲ್ಲೇ ನನ್ನ ಮೋಹದ ಮಕ್ಕಳಾದ ಈ ಪ್ರೇಮೋಲ್ಲಾಸದ ಸೃಷ್ಟ ಜೀವಿಗಳನ್ನು ಈತನು, ನಿರಾಶೆ—ನಿರುತ್ಸಾಹಗಳೆಂಬ ಕ್ರೂರಾಯುಧಗಳನ್ನೆತ್ತಿ ಹೊಡೆದು, ಬಡಿದು, ನಾಶಮಾಡಿದ್ದಾನೆ, ಇನ್ನೂ ನಾಶಮಾಡುತ್ತಲೇ ಇದ್ದಾನೆ. ಈ ನಾಶರೂಪೀ, ಲಯರೂಪೀ, ರೌದ್ರವಿರಕ್ತಿಯನ್ನು ಸಂಹಾರಮಾಡುವುದಕ್ಕಾಗಿಯೇ ಅದೃಶ್ಯಶಕ್ತಿಯಾದ ನಾನು ಈಗ ಸಾಕಾರನಾಗಿ, ಮಾರರೂಪವನ್ನೆತ್ತಿ ಅವತರಿಸಿ ಬಂದಿದ್ದೇನೆ. ಈ ರುದ್ರಶಕ್ತಿಯೊಡನೆ ಭೀಕರವಾದ ಹೋರಾಟ ಹೂಡಿ, ಹಾವಿನ ಹಲ್ಲನ್ನು ಕಿತ್ತೆಸೆಯುವಂತೆ, ಅದರ ವಿರಕ್ತಿಯ ರೌದ್ರವನ್ನು ನಾಶಮಾಡಿ, ಅದನ್ನು ಪ್ರೇಮಹೃದಯದ, ಉಲ್ಲಾಸವೃತ್ತಿಯ ಸುಂದರಸೃಷ್ಟಿಚೈತನ್ಯವಾಗಿ ಮಾರ್ಪಡಿಸಲಿಕ್ಕಾಗಿಯೇ ಬಂದಿದ್ದೇನೆ.

ನಾನು ಮಾಡುವ ಯುದ್ಧವು ಜಗತ್ತಿನ ಇತಿಹಾಸದಲ್ಲಿಯೇ ಕಂಡಿರದ, ಕೇಳಿರದ ಅದ್ಭುತರೀತಿಯ ಅಹಿಂಸಾಯುದ್ಧ. ಇದರಲ್ಲಿ ಶತ್ರುವಿನ ದೇಹನಾಶಕ್ಕೆ ಎಡೆಯಿಲ್ಲ. ಒಂದು ವೇಳೆ ಅಂತಹ ದೇಹನಾಶವಾಗುವುದಾದರೂ ಸತ್ಯಾಗ್ರಹ, ಪ್ರೇಮಾಗ್ರಹ, ಸ್ವರೂಪಿಯಾದ ನಾನು ನನ್ನ ದೇಹವನ್ನೇ ಬಲಿಗೊಟ್ಟುಕೊಳ್ಳುವೆನು. ಆ ಬಲಿದಾನದಿಂದಾಗಿ, ಶತ್ರುವಿನ ಹೃದಯವು ಪ್ರೇಮಾನುಕಂಪಗಳಿಂದ ಕರಗಿ, ತಾನು ಇದುವರೆಗೆ ಮಾಡಿದ್ದ ನಿಷ್ಕ್ರಿಯತೆಯ ಮಹಾಪಾಪಕ್ಕಾಗಿ ಪಶ್ಚಾತ್ತಾಪಪಟ್ಟು, ಪರಿವರ್ತನೆಗೊಳ್ಳುವುದು. ನನ್ನ ದೇಹವು ಅಳಿದರೂ, ನನ್ನ ಪ್ರೇಮಾಗ್ರಹವೆಂಬ ಸತ್ಯಾಗ್ರಹಶಕ್ತಿಯು ಶತ್ರುವಿನ ಹೃದಯಪೀಠದ ಮೇಲೆ ನಿತ್ಯಪೂಜೆಯ ದೇವಾಧಿದೇವನಾಗಿ ಪ್ರತಿಷ್ಠಿತವಾಗುವುದು. ಇದಕ್ಕಿಂತ ಹೆಚ್ಚಿನ ಗೆಲುವಾಗಲೀ, ಕೀರ್ತಿಯಾಗಲೀ ಇನ್ನಾವುದುಂಟು? ಈ ಅಹಿಂಸಾಯುದ್ಧಕ್ಕೆ ನನ್ನಲ್ಲಿರುವ ಆಯುಧಗಳು ಕೂಡಾ ಬಹು ಮೃದುಮಧುರವಾದವುಗಳೇ!

ಪಂಚಭೂತದ ಪಂಚಬಾಣಗಳ ಬತ್ತಳಿಕೆ । ಪಂಚವಿಷಯಾಗ್ನಿ ಜ್ವಾಲೆ ॥
ಮಿಂಚಿನಂತುರಿಯುತಿವೆ, ಹೊಂಚಿಹೊರಹಾಯುತಿವೆ ।
ಬಂಗ್ಯೆವೆನಿವನ ಮೇಲೆ ॥

ಅರವಿಂದ, ಅಶೋಕ, ಚೂತ, ನವಮಲ್ಲಿಕಾ, ನೀಲೋತ್ಪಲ ಎಂಬ ಐದು ಬಗೆಯ ಸುಂದರಪುಷ್ಪಗಳನ್ನೇ ಬಾಣವಾಗಿ ಮಸೆದು ತಂದಿದ್ದೇನೆ. ಇವುಗಳು ಸಾಮಾನ್ಯವಾದ ಬಾಣಗಳಲ್ಲ. ಮಂತ್ರಾಸ್ತ್ರಗಳಿವು! ಪ್ರತಿಯೊಂದು ಪುಷ್ಪಬಾಣದಲ್ಲಿಯೂ ಒಂದು ಅದ್ಭುತವಾದ ಶಕ್ತಿಯನ್ನೇ ಆವಾಹಿಸಿದ್ದೇನೆ. ಭೂಮಿ, ಆಪ, ತೇಜ, ವಾಯು, ಆಕಾಶ—ಎಂಬ ಐದು ಮಹಾಭೂತಗಳಿಂದಲೇ ಈ ಸರ್ವಸೃಷ್ಟಿಯೂ ರೂಪ ಧರಿಸಿ ನಿಂತಿದೆಯಲ್ಲವೆ? ಈ ಭೂತಗಳು, ಕಾರಕ ಮತ್ತು ಮಾರಕ ಎಂಬ ಇಬ್ಬಗೆಯ ಮಹಾಸತ್ವವುಳ್ಳವುಗಳಾಗಿವೆ. ನೆಲ, ಜಲ, ಬೆಂಕಿ, ಗಾಳಿಗಳಿಲ್ಲದೇ ಬದುಕಲಿಕ್ಕೆ ಶಕ್ಯವಿದೆಯೆ? ಹಾಗೆಯೇ ಆ ಬೆಂಕಿ ಸುಟ್ಟು ನಾಶಮಾಡುತ್ತದೆ! ನೆಲ ಭೂಕಂಪದಿಂದ ಬಾಯ್ತೆರೆದು ನುಂಗಿಬಿಡುತ್ತದೆ! ಜಲ ಮಹಾಪೂರವಾಗಿ ಉಕ್ಕಿ ಹರಿದು ಕೊಚ್ಚಿಕೊಂಡು ಹೋಗಿಬಿಡುತ್ತದೆ! ಗಾಳಿ—ಚಂಡಮಾರುತವಾಗಿ ಬೀಸಿ, ಸರ್ವವಸ್ತುಗಳನ್ನೂ ಈ ಬ್ರಹ್ಮಾಂಡದ ಆವರಣದ ಸುತ್ತಲೂ ಗರಗರನೆ ತಿರುಗಿಸಿ, ಆಕಾಶಕ್ಕೆಸೆದು ನಾಶಮಾಡಿಬಿಡುತ್ತದೆ! ಇಂತಹ ಶಕ್ತಿಗಳಾದ ಈ ಪಂಚಭೂತಗಳನ್ನು ಈ ಪುಷ್ಪರೂಪ ಬಾಣಗಳಾಗಿ ಹಿಡಿದಿಟ್ಟುಕೊಂಡು ನನ್ನೀ ಬತ್ತಳಿಕೆಯಲ್ಲಿ ತುಂಬಿದ್ದೇನೆ. ಇವುಗಳು, ಇದೋ, ಐದು ಮಹಾಜ್ವಾಲೆಗಳಾಗಿ, ಬುಸುಗುಡುವ ಐದೆಲೆಯ ಮಹಾಶೇಷನಂತೆ ನಾಲಿಗೆ ಹೊರಹಾಕಿ, ಜ್ವಲಿಸುತ್ತಿವೆ! ಒಂದೊಂದು ಬಾಣ ಒಂದೊಂದು ವಿಷಯಜ್ವಾಲೆಯಾಗಿ, ದೇಹಿಗಳನ್ನು ಸಾಕುಬೇಕು ಮಾಡುವಷ್ಟು ಸಾಮರ್ಥ್ಯವುಳ್ಳದ್ದಾಗಿದೆ. ಕಣ್ಣಿಗೆ ಬಹು ಅಂದವಾಗಿ ಕಾಣುವ ಹೂಬಾಣ! ಮೃದುವಾಗಿ ಮಯ್ಯನ್ನು ತಡವುತ್ತದೆ; ಪರಿಮಳವಾಗಿ ಮೂಗನ್ನು ಹೊಕ್ಕು, ಮನಸ್ಸನ್ನು ಕದಲಿಸುತ್ತದೆ; ಬೇಕು, ಬೇಕು, ಬೇಕು ಎಂಬ ಆಶೆಯ ಬೆಂಕಿ ಜ್ವಾಲೆಯಾಗಿ ನಡೆಸುತ್ತದೆ, ನುಡಿಸುತ್ತಿದೆ, ಬೇಡಿಸುತ್ತದೆ, ಕಾಡಿಸುತ್ತದೆ; ಎಲ್ಲವನ್ನೂ ತನ್ನದೆಂಬ ಮೋಹವನ್ನುಂಟುಮಾಡಿ, ಪ್ರೇಮದ ಮಹಾಪಾಶವನ್ನೇ ಸುತ್ತಿ ಕಟ್ಟಿ ಕೆಡಹುತ್ತದೆ! ತ್ರಾಹಿ, ತ್ರಾಹಿ, ತ್ರಾಹಿ! ಎಂದು ಕಂಡ ಕಂಡ ಸೌಂದರ್ಯಕ್ಕೆಲ್ಲ ಕಾಲಿಗೆ ಬಿದ್ದು

ಯಾಚಿಸುವಂತಹ ಮಹಾ ದೈನ್ಯವನ್ನೇ ರೋಮರೋಮಗಳಲ್ಲಿಯೂ ಹೊಡೆದೆಬ್ಬಿಸುತ್ತದೆ. ಏನೂ ಬೇಡ, ಯಾವುದನ್ನೂ ಮಾಡಲಾರೆನು— ಎಂದು ಕೈಕಟ್ಟಿ ಕೂತ ನಿರಾಶೆಯು ನಿಷ್ಕ್ರಿಯತೆಯನ್ನು ಕ್ರೋಧದಿಂದ ಕುಟ್ಟಿ ಪುಡಿಪುಡಿಮಾಡುವಂತೆ ಆವೇಶ ಉಕ್ಕಿಸುತ್ತದೆ. ಇಂತಹ ಭೀಕರ ವಾದ ಈ ಪಂಚಬಾಣಗಳನ್ನು—ಗೋಮುಖ ವ್ಯಾಘ್ರಗಳನ್ನು ಸಾಕಿದಂತೆ ಬಹು ಜೋಪಾನವಾಗಿ ಕಾದುಕೊಂಡು ಬಂದಿದ್ದೇನೆ. ಇವುಗಳನ್ನೀಗ ಈತನ ಮೇಲೆ, ಕೇವಲ ಲೋಕಕಲ್ಯಾಣದೃಷ್ಟಿಯಿಂದ, ಒಂದೊಂದಾಗಿ ಎಸೆದು ಬರಿಗೈದು ಬಿಡುತ್ತೇನೆ.

ಎಸೆವೆನು ಅರವಿಂದಾಸ್ತ್ರ । ಮುಖ । ಅರಳಿತು ನೋಡು ಪವಿತ್ರ! ।।

ತಾವರೆಯ ಬಾಣವನ್ನಿದೋ! ಎಸೆದಿದ್ದೇನೆ. ಇದು ಪಂಚಭೂತ ಗಳ ಪ್ರಥಮ ಶಕ್ತಿಯಾದ ಭೂಶಕ್ತಿಯಾಗಿದೆ. ಇದನ್ನು ಎಸೆದದ್ದರಿಂದ ಮನುಷ್ಯನಿಗೆ ಮೊಟ್ಟಮೊದಲು ತಾನು ನಿಂತ ನೆಲದ ಜ್ಞಾನವಾಗುವುದು. ರೂಪದಲ್ಲಿ ಆಶೆ ಹುಟ್ಟುವುದು. ಅದೋ ನೋಡಿ! ಈ ತಪಸ್ವಿಯು ಅಂತರ್ಮುಖವಾಗಿ ಅಡಗಿಸಿಟ್ಟುಕೊಂಡಿದ್ದ ಭೂಶಕ್ತಿಯನ್ನು ಬಹಿರ್ಮುಖ ಮಾಡತೊಡಗಿದ್ದಾನೆ. ವೀರ್ಯಧಾರಣದ ತೇಜಸ್ಸಿನಿಂದ ಪವಿತ್ರವಾಗಿದ್ದ ಆ ಮುಖಪದ್ಮವು ಕತ್ತಲೆಯಲ್ಲಿ ಪೂರ್ಣಚಂದ್ರ ಎದ್ದು ಬಂದಂತೆ, ಅರುಣನ ಪರದೆ ಸರಿಸಿ, ಸೂರ್ಯಮಂಡಲ ಕಣ್ತೆರೆದಂತೆ, ಎಷ್ಟು ಸುಂದರವಾಗಿ ಅರ ಳಿದೆ! ಆದರೂ ಆ ಮುಖದಲ್ಲಿ ಇನ್ನೂ, ಚಂದ್ರಮಂಡಲದಲ್ಲಿ ಮೊಲದ ಕರಿ ಕಲೆ ಇದ್ದಂತೆ, ಈ ಪ್ರಪಂಚವು ದುಃಖಮಯವಾದದ್ದೆಂಬ ಶೋಕಭಾವ ನೆಯ ಕಲೆ ಇದೆಯಲ್ಲಾ? ಆದ್ದರಿಂದ,

ತೊಟ್ಟೆನಶೋಕವನೀಗ । ಹಿ । ನ್ಮೆಟ್ಟೀ ವಿರಕ್ತಿಯು ಬೇಗ ।।

ಭೂತಪಂಚಕದಲ್ಲಿ, ಕಶ್ಮಲವನ್ನೆಲ್ಲ ತೊಳೆದು ಸ್ವಚ್ಛ ಮಾಡುವ ಜಲವು ಎರಡನೆಯ ಮಹಾಶಕ್ತಿಯಲ್ಲವೆ? ಆ ಶಕ್ತಿಯನ್ನು ಅಶೋಕಪುಷ್ಪ ರೂಪದ ಬಾಣವಾಗಿಮಾಡಿ ಹೊಡೆದಿದ್ದೇನೆ! ಈ ತೇಜಸ್ವಿಯ ಅರಳಿದ ಮುಖಮಂಡಲದಲ್ಲಿ ಕಾಣಬಂದಿದ್ದ ಶೋಕದ ಕಶ್ಮಲ ಕಲೆಯನ್ನು ಈ ಅಶೋಕಾಸ್ತ್ರವು ನಿರ್ನಾಮ ಮಾಡಿಬಿಟ್ಟಿದೆ! ಆದರೂ, ಈತನು ಕೂತಲ್ಲಿಂದ ಏಳುವುದಿಲ್ಲ! ಓಹೋ, ತಿಳಿಯಿತು! ಆ ದಿವ್ಯ ತೇಜಸ್ಸಿನ ಮುಖಮಂಡಲದ ಅಮೃತಕಲಶವನ್ನು ಎತ್ತಿ ನಿಲ್ಲುವಂತೆ, ಅಂಗಾಂಗಗಳಿನ್ನೂ ತುಂಬಿ, ದಪ್ಪ

ವಾಗಿಲ್ಲ! ಬಹುಕಾಲದ ತಪಸ್ಸಿನಿಂದ, ಅಂಗಾಂಗಗಳ ಸರ್ವರಸಶಕ್ತಿಯನ್ನೂ ಮುಖಮಂಡಲಕ್ಕೆ ಸೆಳೆದುಕೊಂಡು, ಬಳುಕುವ ದಂಟಿನ ಮೇಲೆ ಅರಳಿದ ದೊಡ್ಡ ತಾವರೆ ಹೂವಿನಂತೆ, ಅವುಗಳನ್ನೆಲ್ಲ ಕೃಶಮಾಡಿಕೊಂಡು ಕೂತಿದ್ದ ನಲ್ಲವೆ? ಈಗ ಏನು ಮಾಡುತ್ತೇನೆಂದರೆ—

ಇದೊ ಚೂತಾಂಬಿನ ಮೊನೆಯು। ರಸ। ತುಂಬಿದ ನೋಡದೊ ಮುನಿಯು ॥

ಈ ಚೂತಪುಷ್ಪ ಶರವನ್ನೆಸೆದಿದ್ದೇನೆ! ಅದೋ ನೋಡಿ, ಗಾಳಿತುಂಬಿದ ಚಂಡಿನಂತೆ, ಆತನ ಅಂಗಾಂಗಗಳೆಲ್ಲವೂ ನಿಮಿಷಮಾತ್ರದಲ್ಲಿಯೇ ರಸರಕ್ತಗಳಿಂದ ತುಂಬಿ, ಕಾಂತಿಭರಿತವಾಗಿ ಉಬ್ಬಿ, ಝಗಝಗಿಸುತ್ತಿವೆ! ಶಹಭಾಸ್! ನನ್ನ ಈ ಯುದ್ಧವು ಈಗ ಗೆಲುವಿನ ಹೂವನ್ನು ತೊಟ್ಟಂತಾಗಿದೆ. ಈ ಚೂತಾಸ್ತ್ರದಲ್ಲಿ ಪಂಚಭೂತಗಳಲ್ಲಿ ಮೂರನೆಯದಾದ ತೇಜಸ್ಸು— ಅಂದರೆ, ರಸರಕ್ತದ ದಿವ್ಯ ಕಾಂತಿಯನ್ನು—ಆವಾಹಿಸಿರುವೆನಲ್ಲವೆ? ಅದರ ಪರಿಣಾಮವು ಈತನ ಮೇಲೆ ಆಗಿರುವುದನ್ನು ನೋಡಿ ನಾನು ಮಾತ್ರವೇ ಅಲ್ಲ! ಸಮಸ್ತಲೋಕವೂ ಆನಂದದಿಂದ ಕುಣಿದಾಡತೊಡಗಿದೆ. ಹೀಗೆ ಈತನು ಸರ್ವಾವಯವಗಳಲ್ಲಿಯೂ ತೇಜೋಭರಿತನಾಗಿ ಮಾರ್ಪಟ್ಟಿರುವನಾದರೂ, ಇನ್ನೂ ಕಣ್ತೆರೆಯನಲ್ಲಾ! ತುಂಬಿದ ನಿರ್ಮಲ ಸರೋವರವು ಪ್ರಶಾಂತವಾಗಿ, ತೆರೆಗಳ ಅಲೆದಾಟವಿಲ್ಲದೆ, ನಿಶ್ಚಲವಾಗಿ ಹೊಳೆಯುವಂತೆ, ಈತನ ವಿಶಾಲವಾದ ಹಣೆಯು ಪ್ರಶಾಂತವಾದ ಅಂತರ್ಮುಖ ಮನಸ್ಸನ್ನೇ ಪ್ರತಿಬಿಂಬಿಸಿ ತೋರುತ್ತಿದೆಯಲ್ಲಾ! ಅಲ್ಲಿ ಗೆರೆಗಳಂತೆ, ಹಣೆ ನಿರಿಗಟ್ಟಬೇಕು, ದಡಗಳಂತಿರುವ ಹುಬ್ಬುಗಳನ್ನು ಆ ಅಲೆಗಳು ಬಂದು ಬಡೆಯಬೇಕು. ಈ ಪ್ರಶಾಂತತೆಯ ಮನಸ್ಸಿನ ಜಲವನ್ನೀಗ ಕದಡಬೇಕು, ತೆರೆ ಎಬ್ಬಿಸಬೇಕು. ಅದಕ್ಕಾಗಿ ಈಗಲೇ—

ಮಲ್ಲಿಗೆ ಶರ ಗಮಗಮಿಸೆ। ಮುನಿ। ತಲ್ಲಣಿಸಿದ ಮನ ರಮಿಸೆ ॥

ಈ ಮಲ್ಲಿಗೆಯ ಮನೋಜ್ಞವಾದ ಬಾಣವನ್ನಿದೊ ಎಸೆದಿದ್ದೇನೆ! ನಾಸಾಗ್ರವನ್ನು ತಟ್ಟಿ, ಅದರ ದಿವ್ಯ ಪರಿಮಳವು ಬ್ರಹ್ಮರಂಧ್ರದ ವರೆಗೂ ಏರಿಬಿಟ್ಟಿದೆ! ತುಂಬಿದ ದಾಳಿಂಬದ ಹಣ್ಣಿನ ಸಿಪ್ಪೆಯನ್ನು ತೆಗೆದೊಗೆದಂತೆ, ಈ ಮಲ್ಲಿಕಾಸ್ತ್ರವು ಈತನ ನಿಶ್ಚಲಚಿತ್ತದ ಮೌನದ ಸಿಪ್ಪೆಯನ್ನು ಅದೋ ಕಿತ್ತೆಸೆದಿದೆ! ನವರತ್ನಗಳನ್ನು ತುಂಬಿದ ಬಂಗಾರದ ಪೆಟ್ಟಿಗೆಯ ಮುಚ್ಚಳವನ್ನು ತೆರೆದಂತಾಗಿದೆ! ಆ ರತ್ನಗಳ ಕಾಂತಿ ತೆರೆತೆರೆಯಾಗಿ ಸುತ್ತಲೂ ಮಹಾಪ್ರಭೆಯನ್ನೆ ಹರಡುತ್ತಿದೆಯಲ್ಲಾ! ಶಹಭಾಸ್! ಅದೋ! ಹುಬ್ಬುಗಳು ನಡುಗುತ್ತಿವೆ! ಹಣೆಯಲ್ಲಿ ಮನೋವಿಚಾರಗಳು ತೆರೆಗಟ್ಟುತ್ತಿವೆ!! ಶಿರ

ಕಂಪನವಾದಂತೆ ತೋರುತ್ತದೆ!!! ಆದರೂ ಈತ ಇನ್ನೂ ಕಣ್ತೆರೆಯನಲ್ಲಾ? ಮನಸ್ಸು ಚಲಿಸಿದರೂ, ಈತನ ಅಂಗಾಂಗಗಳು ಚಲಿಸುವುದಿಲ್ಲವಲ್ಲಾ! ಪಂಚಭೂತಗಳ ನಾಲ್ಕನೆಯ ಮಹಾಶಕ್ತಿಯಾದ ಮಾರುತ ಶಕ್ತಿಯು ಈ ನವಮಲ್ಲಿಕಾ ಸುಗಂಧರೂಪವಾಗಿ, ಅಚ್ಚ ಬಿಳಿಯ ಸಾತ್ವಿಕ ಪ್ರೇಮಾನಂದ ವಾಗಿ, ಈತನ ಮನಸ್ಸನ್ನು ಚಲಿಸುವಂತೆ ಮಾಡಿದೆ.

ಈತನು ಎದ್ದುನಿಲ್ಲಬೇಕು, ಕಣ್ತೆರೆದು ಈ ಸೃಷ್ಟಿಯ ಬಹುರೂಪಧಾರಿ ಯಾದ ಪ್ರೇಮಸೌಂದರ್ಯವನ್ನು ನೋಡಬೇಕು. ಅದನ್ನು ಹಿಡಿದು, ಅಪ್ಪಿ, ಮುದ್ದಿಸಿ, ಆನಂದಮಯನಾಗಿ, ಕಾರ್ಯರೂಪದಿಂದ ಚಲಿಸಬೇಕು! ಆಗಲಿ, ಇಷ್ಟು ಸಾಧಿಸಿದ ನನಗೆ, ನನ್ನ ಈ ದಿವ್ಯ ಶರಾವಳಿಗೆ, ಅದನ್ನೂ ಸಾಧಿಸುವುದು ಅಶಕ್ಯವಲ್ಲ! ಇದೊ, ಈಗಲೇ,

ಹೊಡೆವೆನು ನೀಲೋತ್ಪಲವ । ವೃಡ । ಹಿಡಿಯಲಿ ಜೀವನದೊಲವ ॥

ಹೊಡೆದಿದ್ದೇನೆ, ಈ ಆಕಾಶವ್ಯಾಪಿಯಾದ ನೀಲೋತ್ಪಲ ಬಾಣವನ್ನು! ಈ ಬಾಣದ ಮಹಾಶಕ್ತಿಯು ಯಾರನ್ನೂ ಕೂತಲ್ಲಿ ಕೂಡಗೊಡುವುದಿಲ್ಲ. ಎಲ್ಲೆಲ್ಲಿಯೂ ಇದು ಕ್ರಿಯಾರೂಪದಿಂದ ಉತ್ಪಲಿಸುತ್ತ, ಮಧುರವಾದ ಸಂಸಾರದ ಸತ್ಫಲದ ಸಾರವನ್ನು ತುಂಬಿತುಳುಕಿಸುತ್ತ ಹೋಗುವುದು! ಅದೋ, ಈ ಮಹಾನುಭಾವನು ಎದ್ದು ನಿಂತನು! ಕಣ್ತೆರೆಯತೊಡಗಿದ್ದಾನೆ! ಶಹಭಾಸ್!! ನಾನು ಹುಟ್ಟಿದ್ದು ಸಾರ್ಥಕವಾಯಿತು!

ಉರಿಯಾರಿತು ಶಿವನೇತ್ರ । ಸುಖ । ಮೆರೆಯಿತು ಜಗದಿ ವಿಚಿತ್ರ ॥

ಅದೊ, ಆತನ ಹಣೆಯಲ್ಲಿ ಕೂತಿದ್ದ ಮಹಾಜ್ಯೋತಿ ತುಸುತುಸು ವಾಗಿ ಹಬ್ಬುತ್ತ ಉರಿಯುತ್ತ ನನ್ನೆದೆಗೇ ಬರುತ್ತಿದೆ! ನಾನು ಇದುವರೆಗೆ ಕೇವಲ ಈ ಸಂಸಾರದಲ್ಲಿಯೇ ಮಗ್ನನಾಗಿದ್ದು, ನನ್ನಲ್ಲಿದ್ದ ಫಾಲಜ್ಯೋತಿಯ ಮಹಾಶಕ್ತಿಯ ಪ್ರಭೆಯನ್ನು ಕಂದಿಸಿಕೊಂಡಿದ್ದೆನು. ಇದೊ! ಬಂತು, ಬಂತು! ನನ್ನ ದೇಹವನ್ನೇ ಪ್ರವೇಶಿಸತೊಡಗಿದೆ! ಇನ್ನು ಮುಂದೆ, ಈ ಲೋಕಸಂಸಾರದ ಸರ್ವಭಾರವನ್ನೂ ಈತನೇ ವಹಿಸಿಕೊಳ್ಳಲಿ! ನಾನಾ ದರೂ ಮುಂಚಿನಂತೆಯೇ ಅದೃಶ್ಯನಾಗಿ ಈತನ ಮೂಲಕವೇ ಸಂಸಾರ ನಾಟಕವನ್ನು ಆಡಿಸಿ, ಸರ್ವಲೋಕವನ್ನೂ ಸುಖಾನಂದದ ಮಂಗಳದಿಂದ ಮುನ್ನಡೆಸುತ್ತೇನೆ.

ದೃಶ್ಯಕೆ ಶಿವನೈತಂದ । ಆ ದೃಶ್ಯಕೆ ಮಾರನು ಸಂದ ॥

[ಇದನ್ನು ಆಡುವವರು ಕೃತಿಕರ್ತೃವಿನ ಸಮ್ಮತಿ ಪಡೆಯಬೇಕು.]

Edited, Printed and Published by K. V. Shenoy
at The Prabhat Printers, Ltd., Mangalore-1.